ಬರ್ಮಾದ ಸೂಕಿಗೆ ಬೌದ್ಧ ತತ್ತ್ವ ಮತ್ತು ಗಾಂಧೀವಾದಗಳೆರಡೂ ಸೇರಿ ಅಹಿಂಸಾತ್ಮಕ ಹೋರಾಟದ ಅಸ್ತ್ರವನ್ನು ರೂಪಿಸಿಕೊಟ್ಟಿದ್ದರೆ, ಅಮೆರಿಕದ ಕಪ್ಪು ಜನರ ಬಿಡುಗಡೆಗಾಗಿ ಹೋರಾಡಿದ ಕಿಂಗ್ ವ್ಯಕ್ತಿತ್ವದಲ್ಲಿ ಗಾಂಧೀವಾದ ಮತ್ತು ಕ್ರೈಸ್ತ ತತ್ತ್ವಗಳೆರಡೂ ಬೆರೆತು ಆತ್ಮಸ್ಥೈರ್ಯವನ್ನು ಕೊಟ್ಟಿದ್ದವು. ಈ ಇಬ್ಬರೂ ಗಾಂಧೀ ಮಾರ್ಗವನ್ನು ತಂತಮ್ಮ ಧರ್ಮಗಳ ಹಿನ್ನೆಲೆಯಲ್ಲಿ ಕೂಡ ವಿವರಿಸಿಕೊಂಡಿದ್ದರು. ಶಸ್ತ್ರಾಸ್ತ್ರಗಳ ಬಳಕೆಯಲ್ಲಿ ಯಾವ ವಿವೇಚನೆಯೂ, ಹತೋಟಿಯೂ ಇಲ್ಲದ ವ್ಯವಸ್ಥೆಗಳು ಹಾಗೂ ಸರ್ಕಾರಗಳ ಎದುರು ಒಂದು ಜನಸಮುದಾಯವನ್ನು ಹಿಂಸಾಮಾರ್ಗದ ಹೋರಾಟಕ್ಕೆ ಮುನ್ನಡೆಸಿದರೆ ಜನಸಮುದಾಯಗಳಿಗೆ ಎದುರಾಗುವ ಅಪಾಯಗಳ ಬಗ್ಗೆ ಗಾಂಧೀಜಿ ಕಂಡುಕೊಂಡಿದ್ದ ಸತ್ಯಗಳನ್ನು ಈ ಇಬ್ಬರೂ ಅರಿತರು.

ಈ ಇಬ್ಬರಿಗೂ ತಮ್ಮ ಹೋರಾಟದಲ್ಲಿ ಬಗೆಬಗೆಯ ಹಿಂಸೆಗಳು ಎದುರಾದವು; ಆದರೆ, ಹಿಂಸೆಯ ಎದುರು ಪ್ರತಿಹಿಂಸೆಗೆ ಕರೆ ಕೊಟ್ಟರೆ ನಿರಾಯುಧರಾದ ಅಥವಾ ಕಡಿಮೆ ಆಯುಧಗಳನ್ನುಳ್ಳ ಜನಸ್ತೋಮದ ಹೋರಾಟಗಳನ್ನು ಬಗ್ಗು ಬಡಿಯುವುದು ಸರ್ಕಾರಗಳಿಗೆ ಸುಲಭ ಎಂಬುದು ಅವರ ಅನುಭವಕ್ಕೆ ಬರತೊಡಗಿತು. ಎಷ್ಟೋ ಸಲ ಸರ್ಕಾರ ನಡೆಸುವವರು ಹಾಗೂ ವ್ಯವಸ್ಥೆಯ ಆಯಕಟ್ಟಿನಲ್ಲಿರುವವರೇ ಹಿಂಸೆಯನ್ನು ಹುಟ್ಟು ಹಾಕಿ ಚಳವಳಿಗಳನ್ನು ದಮನ ಮಾಡುತ್ತಾರೆಂಬ ವಾಸ್ತವವೂ ಅವರಿಗೆ ಅರಿವಾಯಿತು. 1956ರಲ್ಲಿ ಮಾರ್ಟಿನ್ ಲೂಥರ್ ಕಿಂಗ್ ಮನೆಯ ಮೇಲೆ ಇದ್ದಕ್ಕಿದ್ದಂತೆ ಬಾಂಬ್ ದಾಳಿಯಾಯಿತು. ವಿಷಯ ತಿಳಿದು ಕಿಂಗ್ ಮನೆಗೆ ಬರುವ ಹೊತ್ತಿಗಾಗಲೇ ಅವರ ಮನೆಯೆದುರು ಕುಪಿತ ಬೆಂಬಲಿಗರು ಸೇರಿದ್ದರು. ಮನೆಯೊಳಗಿದ್ದ ಅವರ ಮಗಳು ಹಾಗೂ ಹೆಂಡತಿಗೆ ಯಾವುದೇ ಅಪಾಯವಾಗಿರಲಿಲ್ಲ.

ಬಿಳಿಯರ ಹಿಂಸೆಗಳಿಂದ ನೊಂದಿದ್ದ ಸಾವಿರಾರು ಕಪ್ಪು ಜನರು ಅವತ್ತು ಪ್ರತಿದಾಳಿ ನಡೆಸಲು ತುದಿಗಾಲಲ್ಲಿದ್ದರು. ಆಗ ಕಿಂಗ್ ಹೇಳಿದ ಮಾತು: 'ನಿಮ್ಮಲ್ಲಿ ಆಯುಧಗಳಿದ್ದರೆ ಅವನ್ನು ವಾಪಸ್ ಮನೆಗೆ ತೆಗೆದುಕೊಂಡು ಹೋಗಿ. ನಿಮ್ಮಲ್ಲಿ ಆಯುಧಗಳಿಲ್ಲದಿದ್ದರೆ ಅವನ್ನು ಹುಡುಕಿಕೊಂಡು ಹೋಗಬೇಡಿ. ಹಿಂಸೆಗೆ ಪ್ರತಿಹಿಂಸೆ ಮಾಡುವ ಮೂಲಕ ಕಪ್ಪುಜನರ ಸಮಸ್ಯೆಯನ್ನು ಬಗೆಹರಿಸಲಾಗದು. ಬದಲಿಗೆ, ಹಿಂಸೆಯನ್ನು ಅಹಿಂಸೆಯಿಂದ ಎದುರಿಸಬೇಕು.' ಅಮೆರಿಕದಲ್ಲಿ ನೆಲೆಸಿದ್ದ ಆಫ್ರಿಕನ್ನರು ಅವತ್ತು ಹಿಂಸೆಗೆ ಇಳಿದಿದ್ದರೆ ಆಧುನಿಕ ಅಸ್ತ್ರಗಳಿದ್ದ ಅಮೆರಿಕಾ ಸರ್ಕಾರ ಅವರನ್ನು ಸುಲಭವಾಗಿ ನಿರ್ನಾಮ ಮಾಡಿಬಿಡುತ್ತಿತ್ತು. 'ಏಸುಕ್ರಿಸ್ತ ನಮಗೆ ಮಾರ್ಗ ತೋರಿದ; ಇಂಡಿಯಾದಲ್ಲಿ ಗಾಂಧೀಜಿ ಆ ಮಾರ್ಗದ ಮೂಲಕ ಗುರಿ ಸಾಧಿಸಬಹುದು ಎಂಬುದನ್ನು ತೋರಿಸಿದರು' ಎಂದಿದ್ದ ಕಿಂಗ್, 'ಗಾಂಧೀಜಿ ಬ್ರಿಟಿಷರ ರಾಜಕೀಯ–ಆರ್ಥಿಕ ದಬ್ಬಾಳಿಕೆಯನ್ನು ಮುರಿಯಲು ಅಹಿಂಸೆಯನ್ನು ಬಳಸಿದರು; ನಾವೀಗ ಅದೇ ಮಾದರಿಯನ್ನು ಅಮೆರಿಕದಲ್ಲಿ ಬಳಸಬೇಕು' ಎಂಬುದನ್ನು ಕಪ್ಪು ಹೋರಾಟಗಾರರಿಗೆ ಮನವರಿಕೆ ಮಾಡಿಕೊಟ್ಟರು.

ಅತ್ತ ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ಚಳವಳಿಯ ಮೊದಲ ಘಟ್ಟದಲ್ಲಿ, 1952ರಲ್ಲಿ ಗಾಂಧೀ ಮಾದರಿಯ 'ನಾಗರಿಕತಾ ಅವಿಧೇಯತಾ ಚಳವಳಿ'ಯನ್ನು ಆರಂಭಿಸಿದ್ದ 'ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್' ಪಕ್ಷವನ್ನು ಬಿಳಿಯರ ಸರ್ಕಾರ ನಿಷೇಧಿಸಿದ ಮೇಲೆ ನೆಲ್ಸನ್ ಮಂಡೇಲ ಅನಿವಾರ್ಯವಾಗಿ ಭೂಗತ ಹೋರಾಟಕ್ಕೆ ಇಳಿದರು. ಮುಂದೆ ಗೆರಿಲ್ಲಾ ಮಾದರಿಯ ಸಶಸ್ತ್ರ ಹೋರಾಟಕ್ಕೆ ಇಳಿದು ದೇಶ ಬಿಟ್ಟುಹೋಗಿ ಆಲ್ಜೀರಿಯಾದಲ್ಲಿ ಮಿಲಿಟರಿ ತರಬೇತಿ ಪಡೆದರು. ಕೆಲ ವರ್ಷಗಳ ನಂತರ ಆಫ್ರಿಕಾದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಲು ಮಂಡೇಲ ಮರಳಿ